The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. C. DASAPPA.—I move :

"That the Mysore Sales-Tax (Second Amendment) Bill, 1951, be passed."

Mr. SPEAKER.—The question is :

"That the Mysore Sales-Tax (Second Amendment) Bill, 1951, be passed."

The motion was adopted.

The Hon'ble Sri H. C. DASAPPA.—The idea is not to take the Kolar Gold Fields Municipal Bill to-day.

Janab MAHMOOD SHERIFF.—Not during the session or to-day ?

The Hon'ble Sri H. C. DASAPPA.—That also shall be considered.

The Mysore Forest (Amendment) Bill, 1951.

Motion to consider.

The Hon'ble Sri R. CHENNIGARAMIAH (Minister for Local Self-Government).—I move :

"That the Mysore Forest (Amendment) Bill, 1951, be taken into consideration."

ಈಗಿರತಕ್ಕ Forest Act ನಲ್ಲಿ ಕೊಯಿದ ಟಿಂಬರ್ ಎನ್ನುವುದು ಗಣನೆಗೆ ಬರುವುದಿಲ್ಲ. 'ಟಿಂಬರ್' ಎನ್ನುವುದರ ಅರ್ಥ ವಿವರಣೆಯಲ್ಲಿ ಕೊಯಿದಿರತಕ್ಕ ಮರ ಸೇರುವುದಿಲ್ಲ. ಹೀಗಾಗಿ ಕೊಯಿದಿರತಕ್ಕ ಮರವನ್ನು ಯಾರಾದರೂ ಕಳ್ಳತನದಿಂದ ಸಾಗಿಸುತ್ತಿದ್ದುದನ್ನು ಕಂಡುಹಿಡಿದರೂ ಅದು ತಕ್ಸೀರಾಗುವುದಿಲ್ಲ. ಹೀಗೆ ಅದು ಫಾರೆಸ್ಟ್ ಆಕ್ಟಿನ ಪ್ರಕಾರ ತಕ್ಸೀರೆಂದು ಪರಿಗಣಿಸಲ್ಪಡದಿರುವುದರಿಂದ ಅನೇಕರಿಗೆ ಕಳ್ಳ ಸಾಗಾಣಿಕೆ ನಡೆಸುವುದಕ್ಕೆ ಅವಕಾಶವಾಗಿದೆ. ಇದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಕೊಯಿದ ಟಿಂಬರನ್ನು 'ಟಿಂಬರ್' ಎಂಬ ಪದದ ಅರ್ಥದಲ್ಲಿ ಸೇರುವಂತೆ ಒಂದು ತಿದ್ದುಪಡಿ ತಂದಿದ್ದೇವೆ.

ಎರಡನೆಯದಾಗಿ ಗರಗಸದ ಗುಂಡಿಗಳಿಗೆ ಲೈಸೆನ್ಸ್ ಇರಬೇಕೆಂಬ ವಿಚಾರ. ಈಗಿನ ಕಾನೂನು ಪ್ರಕಾರ ಗರಗಸದ ಗುಂಡಿಗಳನ್ನು ತೋಡಿಸಲು ಲೈಸೆನ್ಸ್ ತೆಗೆದುಕೊಳ್ಳಬೇಕೆಂದಿದೆ. ಆದರೆ, ಈಚೆಗೆ ಮರಕೊಯ್ಯಿಸುವವರು ನವೀನ ಮೆಷನರಿಗಳನ್ನು ಉಪಯೋಗಿಸುತ್ತಾ ಭೂಮಿಯ ಮೇಲೆಯೇ ಯಂತ್ರಗಳನ್ನಿಟ್ಟು ಮರಕೊಯ್ಯಿಸುತ್ತಾರೆ. ಅವರು ಗುಂಡಿಗಳನ್ನು ತೋಡದೆ ಇರುವುದರಿಂದ ಈ ಆಕ್ಟು ಅವರಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಇಂಥವುಗಳಿಗೂ ಅನ್ವಯವಾಗಬೇಕೆಂದು ಹೇಳಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ.

ಆಮೇಲೆ ಜುಲ್ಮಾನೆಯ ಮೊತ್ತವನ್ನೂ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಬೇಕೆಂದು ಮಾಡಿದ್ದೇವೆ. ಈಗ ಜುಲ್ಮಾನೆ ವಿಧಿಸುವುದರಲ್ಲಿ ರೇಂಜ್ ಆಫೀಸರು 50 ರೂಪಾಯಿಗಳವರೆಗೂ ಹಾಕಬಹುದೆಂದಿದೆ. ಅದನ್ನು ತಪ್ಪಿಸಿ 100 ರಿಂದ 500 ರೂಪಾಯಿಗಳವರೆಗೂ ಜುಲ್ಮಾನೆ ವಿಧಿಸುವುದಕ್ಕೆ ಅಧಿಕಾರ ಕೊಟ್ಟಿದೆ.

ಒಬ್ಬ ಸದಸ್ಯರು.—ಎಷ್ಟು ಕೊಯಿದರೂ 500 ರೂಪಾಯಿಯೇ ಜುಲ್ಮಾನೆ !!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಲ್ಲ. ಆಯಾ ಸಂದರ್ಭದ ಮೇಲೆ ಹೋಗುತ್ತದೆ.

ಈರೀತಿಯಾಗಿ ಮಾಡುವುದಾದರೆ smuggling ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಈಗಾಗಲೇ ಸರ್ಕಾರದವರು ಅನೇಕ checking ಸ್ಟೇಷನ್‌ಗಳನ್ನು ಹಾಕಿ ಕಾಡುಗಳಲ್ಲಿ ಕಳ್ಳತನವಾಗುವುದನ್ನು ಹಿಡಿಯುತ್ತಿದ್ದಾರೆ. ಕಳ್ಳತನ ಬಹುಮಟ್ಟಿಗೆ ಕಡಿಮೆಯಾಗಿದೆಯೆಂದೂ ಹೇಳಬಹುದು. ಆದರೂ ಕೆಲವು ಕಡೆ ನಾನೀಗ ಹೇಳಿದ ಕಾರಣಗಳಿಂದ smuggling ಕೇಸುಗಳು ತಪ್ಪಿಸಿಕೊಂಡು ಹೋಗುತ್ತಿವೆ. ಇಂಥಾದ್ದನ್ನೂ ತಡೆಗಟ್ಟುವುದಕ್ಕಾಗಿ ಈರೀತಿಯಾಗಿ amendment ತಂದಿದ್ದೇವೆ. ಸಭಾಸದಸ್ಯರು

ಇದಕ್ಕೆ ತಮ್ಮ ಅನುಮತಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

Mr. SPEAKER.—Motion moved :

"That the Mysore Forest (Amendment) Bill, 1951 be taken into consideration."

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ಅರಣ್ಯ ಸಂಪತ್ತನ್ನು ಚೆನ್ನಾಗಿ ಕಾಪಾಡಿಕೊಂಡು ಅದರಿಂದ ಬರಬಹುದಾದ ಸಂಪೂರ್ಣ ವರಮಾನವನ್ನು ಸರ್ಕಾರದವರು ಪಡೆದು ಆ ಮೂಲಕ ದೇಶದ ಅಭಿವೃದ್ಧಿ ಮತ್ತು ಕ್ಷೇಮ ಸಾಧನೆ ಮಾಡುವುದು ಅಗತ್ಯವೆಂಬುದನ್ನು ನಾನು ಹೇಳಬೇಕಾದ್ದಿಲ್ಲ. ಅದನ್ನು ಚೆನ್ನಾಗಿ ಕಾಪಾಡಿಕೊಳ್ಳುವುದರ ಜೊತೆಗೆ ಅದರಿಂದ ಬರತಕ್ಕ ಉತ್ಪನ್ನಗಳು—ಮುಖ್ಯವಾಗಿ ಈ ನಾಟಾಗಳು ಯಾವ ರೀತಿಯಲ್ಲೂ ಅನ್ಯಾಕ್ರಾಂತವಾಗದ ಹಾಗೆ ನೋಡಿಕೊಳ್ಳಬೇಕು. ಭಗವಂತನ ದಯದಿಂದ ನಮ್ಮ ದೇಶದಲ್ಲಿ ಒಳ್ಳೆಯ ಅರಣ್ಯವಿದೆ. ಈಗ ನಮಗೆ ತಿಳಿದುಬಂದಿರುವ ಹಾಗೆ, ನಮ್ಮ ಕಾನೂನಿನಲ್ಲಿ ಸ್ವಲ್ಪ ಲೋಪದೋಷಗಳನ್ನೇ ಒಂದು ದೊಡ್ಡ ನೆಪವಾಗಿ ಮಾಡಿಕೊಂಡು ಕೆಲವು ಜನರು ಲಕ್ಷಾಂತರ ರೂಪಾಯಿಗಳ ನಾಟಾ ಇತ್ಯಾದಿ ಸಾಗಿಸಿಕೊಂಡು ಹೋಗಿ ದೇಶಕ್ಕೆ ಬಹಳ ಅನ್ಯಾಯ ಮಾಡುತ್ತಿರುವುದು ಈಚೆಗೆ ಕೆಲವು ವರ್ಷಗಳಿಂದ ಸರ್ಕಾರದವರ ಗಮನಕ್ಕೆ ಬಂದಿದೆ. ಸಾಧ್ಯವಾದಷ್ಟು ಮಟ್ಟಿಗೆ ಈಗಲೂ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಕೊಂಡು ಬಹಳ ಯಶಸ್ವಿಯಾಗಿ ಅರಣ್ಯ ಇಲಾಖೆಯನ್ನು ನಡೆಸಿಕೊಂಡು ಬರುತ್ತಿರುವುದು ಸಂತೋಷಕರವಾದ ಸಂಗತಿ. ಆದರೂ ಜನ ಅರಣ್ಯದ ಸ್ವತ್ತನ್ನು ಅಪಹಾರ ಮಾಡುವುದಕ್ಕೆ ನಾನಾ ತೆರನಾದ ಚಮತ್ಕಾರಗಳನ್ನು ನಾನಾ ತೆರನಾದ ವಿಧಾನಗಳನ್ನು ಉಪಯೋಗಿಸುತ್ತಾರೆ. ಎಷ್ಟೋ ಜಾಣತನದಿಂದ ಅರಣ್ಯದಲ್ಲಿ ಹೋಗಿರತಕ್ಕ ನಾಟಾಗಳನ್ನು ಕಳವು ಮಾಡಿ ತೆಗೆದುಕೊಂಡು ಹೋಗುತ್ತಿದ್ದುದನ್ನು ನಮ್ಮ ಅರಣ್ಯದ ಇಲಾಖೆಯವರು ಬಹಳ ವಿಚಕ್ಷಣೆಯಿಂದ, ಹಿಡಿದರು, ಈ ಕಾನೂನಿನಲ್ಲಿರುವ ಒಂದು ಸಣ್ಣ ಲೋಪದಿಂದ ಆ ಮರಗಳು ಗರಗಸದಿಂದ ಕೊಯಿದ ಮರಗಳೆಂದು ಹೇಳಿ, ಅದಕ್ಕೆ ಕಾನೂನು ಅನ್ವಯವಾಗುವುದಿಲ್ಲವೆಂದು ಹೇಳಿ ತಪ್ಪಿಸಿಕೊಂಡು ಹೋಗುತ್ತಾರೆ. ಆದ್ದರಿಂದ ಇಂಥಾದ್ದನ್ನು ತಪ್ಪಿಸುವುದಕ್ಕಾಗಿ ಈ ತಿದ್ದುಪಡಿ ತಂದಿದೆ.

ಶ್ರೀ. ಎಸ್. ರಂಗರಾಮಯ್ಯನವರು.—ತಾವೇನಾದರೂ ಅಂಥ ಕೇಸು ಹಿಡಿದು ಯಾರನ್ನಾದರೂ ಬಿಡಿಸಿದ್ದೀರೋ?

ಶ್ರೀ ಟಿ. ಮಾದಯ್ಯ ಗೌಡರು.—ಶ್ರೀ ರಂಗರಾಮಯ್ಯನವರಂಥವರು ಹಾಗೆ ಚರ್ಚಿಸಿ ಬಿಡಿಸದೆ ಇದ್ದಿದ್ದರೆ ಈ ಕಾನೂನಿಗೆ ಅಗತ್ಯವೇ ಇರಲಿಲ್ಲ. ಆದ್ದರಿಂದ ಸರ್ಕಾರದವರು ಒಳ್ಳೆಯ ಕಾನೂನು ತಂದಿದ್ದಾರೆಂದು ಹೇಳಬೇಕು. ನಮ್ಮ ಅರಣ್ಯದಲ್ಲಿರುವ ಲಕ್ಷಾಂತರ ರೂಪಾಯಿಗಳ ನಾಟಾಗಳು ಹೀಗೆ ಅನ್ಯಾಕ್ರಾಂತವಾಗಿ ಹೋದರೆ ನಮ್ಮ ದೇಶಕ್ಕೆ ಎಷ್ಟು ನಷ್ಟವಾಗುತ್ತದೆಂಬದನ್ನು ಹೇಳಬೇಕಾದ್ದಿಲ್ಲ.

ಈಚೆಗೆ ಮರಗಳನ್ನು ಕೊಯ್ಯತಕ್ಕ ವಿಧಾನವೂ ಈಗ ಬದಲಾವಣೆಯಾಗಿದೆ. ಹಿಂದೆ ಗುಂಡಿಗಳನ್ನು ತೆಗೆದು ಕೊಯ್ಯುತ್ತಿದ್ದರು. ಅದಕ್ಕೆ ಸರಿಯಾಗಿ ಹಿಂದೆ ಕೊಯ್ಯುವ ಗುಂಡಿ ತೆಗೆಸುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಮಾಡಿತ್ತು. ಈಗ ಅದೆಲ್ಲಾ ಹೋಗಿ ಮೆಷಿನ್‌ಗಳು ಬಂದಿವೆ. ಈ ಮೆಷಿನ್ ಮೂಲಕ ಕೊಯಿದರೆ ಈಗಿನ ಕಾನೂನು ಅನ್ವಯವಾಗುವುದಿಲ್ಲ. ಹೀಗಾಗಿ ಇದರ ಮೇಲೆ ಮೊದಲಿದ್ದ ಹತೋಟೆ ತಪ್ಪಿಹೋಗಿದೆ. ಆದ್ದರಿಂದ ಈ ತಿದ್ದುಪಡಿಯ ಮೂಲಕ ಮೆಷಿನ್ನಿನ ಸಹಾಯದಿಂದ ಕೊಯ್ಯುವುದನ್ನೂ ಹತೋಟೆಗೆ ತೆಗೆದುಕೊಳ್ಳಲು ಪ್ರಯತ್ನ ಮಾಡಿದೆ.

ಆದರೆ, ಕೊನೆಯಲ್ಲಿ ಫಾರೆಸ್ಟ್ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು 500 ರೂಪಾಯಿ ಜುಲ್ಮಾನೆ ವಿಧಿಸುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಒಂದು ವಿಧದಲ್ಲಿ ಇದು ಒಳ್ಳೆಯದೆಂದು ಹೇಳಬಹುದು. ಫಾರೆಸ್ಟ್ ಇಲಾಖೆಯ ಅಧಿಕಾರಿಗಳೆಲ್ಲರೂ ನಿಜವಾಗಿ

(ಶ್ರೀ ಟಿ. ಮಾದಯ್ಯಗೌಡರು)

ನಿಸ್ಪೃಹರಾಗಿದ್ದರೆ, ಫಾರೆಸ್ಟ್ ಇಲಾಖೆಯಲ್ಲಿ ನಡೆಯುತ್ತಿರುವ ನಾಟಾಗಳ ಕಳವನ್ನು ತಪ್ಪಿಸಿ ಇನ್ನೂ ಬಹುಮಟ್ಟಿಗೆ ನಮ್ಮ ಅರಣ್ಯದ ಉತ್ಪತ್ತಿಯನ್ನು ಹೆಚ್ಚಿಸಬಹುದೆಂದು ಹೇಳಬಲ್ಲೆ. ಇದಕ್ಕಾಗಿ ಒಬ್ಬರಮೇಲೊಬ್ಬರು ಉಸ್ತುವಾರಿಯಿಟ್ಟು ವಿಚಕ್ಷಣೆಯಿಂದ ನೋಡಿಕೊಳ್ಳುವ ಏರ್ಪಾಡು ಮಾಡಬೇಕು. ಈ ನಮ್ಮ ಕಾಂಗ್ರೆಸ್ ಸರ್ಕಾರವೇರ್ಪಟ್ಟಮೇಲೆ ಮಂತ್ರಿಗಳೇ ಖುದ್ದಾಗಿ ಕೆಲವು ನಾಟಾ ಕೇಸುಗಳನ್ನು ಹಿಡಿದಿರುವುದು ನಮಗೆ ತಿಳಿದುಬಂದಿದೆ. ಆದ್ದರಿಂದ ಒಬ್ಬರ ಮೇಲೊಬ್ಬರು ಸರಿಯಾಗಿ ನಿಗಾಇಟ್ಟು ನೋಡಿಕೊಳ್ಳುವವರಿರಬೇಕು. ಆದ್ದರಿಂದ ನಮ್ಮ ಇಲಾಖೆಯವರು ಈ ತೆರದ ಕಳವುಗಳು ಆಗುತ್ತವೆಂಬುದನ್ನು ತಿಳಿದು, ಅಂಥವುಗಳನ್ನು ಯಾರೂಮುಚ್ಚಿಡದೆ ತಮ್ಮತಮ್ಮಲ್ಲೇ ಸರಿಮಾಡಿಕೊಳ್ಳೋಣವೆನ್ನುವ ಮನೋಭಾವ ಉಂಟಾಗುವುದಕ್ಕೆ ಅವಕಾಶವಿರದ ಹಾಗೆ ನೋಡಿಕೊಳ್ಳಬೇಕು. ಈ ರೀತಿಯಾಗಿ ಎಲ್ಲಾ ಏರ್ಪಾಡುಗಳನ್ನು ಮಾಡಿ ಅರಣ್ಯದ ನಾಟಾಗಳು ದುರ್ವ್ಯಯವಾಗುವುದಕ್ಕೆ ಅವಕಾಶವಾಗದಂತೆ ತಂದಿರುವ ಈ ಕಾನೂನನ್ನು ಎಲ್ಲರೂ ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಅರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ನಗರ.—ಒಂದು ಸಣ್ಣ ವಿಷಯ ತಮ್ಮನ್ನು ಕೇಳಬೇಕಾಗಿದೆ. ನಮ್ಮ ಪೂರ್ವಿಕರು ಹೇಳುವ ಒಂದು ವಾಡಿಕೆಯಿತ್ತು, ಒಂದು ಮರ ಕಡಿದರೆ ಒಂದು ಸಸಿ ನೆಡು ಎಂದು. ಆ ರೀತಿಯಾಗಿ ಯಾರಾದರೂ ಒಂದುವೇಳೆ ಒಂದು ಸಸಿಯನ್ನು ನೆಟ್ಟು ಒಂದು ಮರ ಕಡಿದಿದ್ದರೆ, ಅಂಥವರ ವಿಷಯದಲ್ಲೇನಾದರೂ ವಿನಾಯಿತಿ ಕೊಡಲಿಕ್ಕೇನಾದರೂ ಇದರಲ್ಲಿ ಅವಕಾಶ ಮಾಡಿದ್ದೀರಾ ?

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಸ್ವಾಮಿ, ಅರಣ್ಯ ಸಚಿವರು ನಮ್ಮ ಮುಂದಿಟ್ಟಿರತಕ್ಕ ಈ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಮಾಡಬೇಕೆಂದು ನಿಂತಿದ್ದೇನೆ. ಈಗ ಅವರು ಕುಯ್ದ- ಮರ ಎಂದು ಹೇಳಿದರು. ಕೆಲವು ಸಂದರ್ಭಗಳಲ್ಲಿ ಅರಣ್ಯಗಳಲ್ಲಿ ನಾಟಾಗಳನ್ನು ಕುಯ್ದು ಸಾಗಿಸುವಾಗ ಕೆಲವು ತುಂಡುಗಳನ್ನು ಅಲ್ಲೇ ಬಿಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಹಳ್ಳಿಗಾಡಿನವರು ಮನೆಯ ಉಪಯೋಗಕ್ಕೆ ಸೌದೆಯನ್ನೂ ತರಬೇಕಾದರೆ ಕುಯ್ದ ತುಂಡುಗಳನ್ನು ಹಾಕಿಕೊಂಡು ಬರುವ ಸಂದರ್ಭಗಳು ಬರುತ್ತವೆ. ಅಂತಹ ಸಂದರ್ಭಗಳಲ್ಲಿ ಅವು ಕುಯ್ದ ನಾಟಾ ಎಂದು ಹೇಳುವುದಾದರೆ, ಉದ್ದಕ್ಕೆ ಕುಯ್ದಿರುವುದೆ ಅಥವ ಅಡ್ಡಕ್ಕೆ ಕುಯ್ದಿರುವುದೆ ಎಂಬುದನ್ನು ವಿಮರ್ಶೆಮಾಡಿ ನಮೂದಿಸಬೇಕೆಂದು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಡ್ಡಕ್ಕೆ ಕುಯ್ದಾಗ ಸೌದೆಯಾಗುತ್ತದೆ, ಉದ್ದಕ್ಕೆ ಕುಯ್ದರೆ ಕದ ಸೈಜ್ ಮರ, ತೊಲೆಯಾಗುತ್ತದೆ. ಆದುದರಿಂದ ಇದನ್ನು ಸ್ವಲ್ಪ ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಕಾಡುಗಳಲ್ಲಿ ಮಾನ್ಯ ಸಚಿವರು ಹೇಳಿದ ಹಾಗೆ, ಮರ ಕೊಯ್ಯಲು ಗುಂಡಿಗಳನ್ನು ತೆಗೆಯುವ ಬದಲು ಮರಕ್ಕೆ ಮರಗಳನ್ನು ಕಟ್ಟಿ ಕೊಯ್ಯುವ ಪದ್ಧತಿ ಇದೆ. ಇದರಿಂದ ಲೈಸೆನ್ಸ್ ತಪ್ಪಿಸಿಕೊಳ್ಳಬಹುದು. ಇದನ್ನು ತಪ್ಪಿಸಬೇಕಾದರೆ ಸೂಕ್ತ ತಿದ್ದುಪಡಿ ಮಾಡಿದರೆ ಅನುಕೂಲ. ನಮ್ಮ ಸಚಿವರು ಅಧಿಕಾರಕ್ಕೆ ಬಂದಮೇಲೆ ಅರಣ್ಯಗಳಲ್ಲಿ ನಡೆಯುತ್ತಿದ್ದ ಕಳ್ಳತನಗಳು ಕಡಿಮೆಯಾಗಿವೆ. ಆದರೂ ಈ ಸಂಬಂಧವಾಗಿ ಸ್ವಲ್ಪ ತಿದ್ದುಪಡಿ ಮಾಡಿದರೆ ಉತ್ತಮ, ಅದನ್ನು ಮಾಡುತ್ತಾರೆಂದು ನಂಬಿ, ಇದನ್ನು ಸಮರ್ಥಿಸುತ್ತೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ಮ ಪಂಗಡ).—ಅಧ್ಯಕ್ಷರೆ, ಮಾನ್ಯ ಸಚಿವರು ಮಂಡಿಸಿರುವ ಈ ಅರಣ್ಯ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳುತ್ತೇನೆ. ಮರಕೊಯ್ಯುವವರು ಮಾಡತಕ್ಕ ಕಳ್ಳತನವನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಆದರೆ ಇದರಿಂದ ಕಳ್ಳತನ ಸಂಪೂರ್ಣವಾಗಿ ನಿಲ್ಲುತ್ತದೆಂದು ನಾನು ನಂಬುವುದಿಲ್ಲ.

ಮಾನ್ಯ ಶ್ರೀ ಆರ್. ಚಿನ್ನಿಗರಾಮಯ್ಯನವರು.—ನಾನು ಹಾಗೆ ಹೇಳಲಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇದರಿಂದ ಲಂಚ ರುಷುವತ್ತುಗಳಿಗೆ ಅವಕಾಶವಾಗುತ್ತದೆ. ರೈತರು ಮರ ಕೊಯ್ಯುವುದಕ್ಕೂ ಸ್ವಾತಂತ್ರ್ಯವಿಲ್ಲದೆ ಅವರಿಗೆ ತೊಂದರೆಯಾಗುತ್ತದೆಯೇ ವಿನಾ ಅನುಕೂಲವಾಗುವುದಿಲ್ಲ. ಸರ್ಕಾರದವರು ಮಾಡತಕ್ಕ ಕಾನೂನು ಜನರಿಗೆ ಅನುಕೂಲವಾಗಿ ಕಳ್ಳತನ ನಿಲ್ಲುವಂತಿರಬೇಕು. ಹೀಗೆ ಮರ ಕೊಯ್ಯುವವರು ಎಂದು ಮಾಡಿದರೆ ರೈತರಿಗೆ ತೊಂದರೆಯಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಕಳ್ಳತನವನ್ನು ಆಫೀಸರುಗಳೇ ಮಾಡುತ್ತಾರೆ. ಮೊಬೈಲ್ ಪಾರ್ಟಿಯವರು ತಾವೇ ಮರಗಳನ್ನು ಕಡಿಸಿ ತೆಗೆದುಕೊಳ್ಳುತ್ತಾರೆ. ಎಲ್ಲೋ ಕೆಲವು ಕಳ್ಳರಿಗೆ ತೊಂದರೆಯಾಗಬಹುದು. ಆದರೂ ಕೂಡ ಹೆಚ್ಚಾಗಿ ರೈತರಿಗೇ ತೊಂದರೆಯಾಗುತ್ತದೆ. ಅಧಿಕಾರಿಗಳು ಕಳ್ಳತನ ಮಾಡಲು ಪ್ರಚೋದಿಸಿ ಮಾಡಿಸುತ್ತಾರೆ. ಆದುದರಿಂದ ಗರಗಸದ ಮೇಲೆ ಮರ ಕೊಯ್ಯುವವರು ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಮಾಡಿರುವುದು ಸರಿಯಲ್ಲ. ಮುಖ್ಯವಾಗಿ ಕಳ್ಳತನ ಮಾಡುವುದು ರಿಜರ್ವ್ ಮರಗಳಾದ ತೇಗ, ಹೊನ್ನೆ ಮರಗಳನ್ನು ಏಕೆಂದರೆ ಇದಕ್ಕೆ ಹೆಚ್ಚು ಬೆಲೆ ಬರುತ್ತದೆ. ರಿಜರ್ವ್ ಅಲ್ಲದ ಮರಗಳನ್ನು ರೈತರು ಕೊಯ್ಯುತ್ತಾರೆ. ಇದಕ್ಕೂ ಲೈಸೆನ್ ತೆಗೆದುಕೊಳ್ಳಬೇಕೆಂದರೆ ರೈತರಿಗೆ ತೊಂದರೆಯಾಗುತ್ತದೆ. ವ್ಯವಸಾಯದ ಉಪಕರಣಗಳನ್ನು ಮಾಡಲು ಮರ ಕೊಯ್ಯುವುದಕ್ಕೂ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಹೇಳಿದರೆ ತೊಂದರೆಯಾಗುತ್ತದೆ. ಆದುದರಿಂದ ಇದು ನ್ಯಾಯವಲ್ಲ. ಕಳ್ಳತನವನ್ನು ನಿಲ್ಲಿಸಬೇಕೆಂಬ ಇಷ್ಟವಿದ್ದರೆ ಮೊಬೈಲ್ ಪಾರ್ಟಿಯವರು ನಾಲ್ಕೈದು ವರ್ಷಕಾಲ ಒಂದೇ ಕಡೆ ಇರುವುದಕ್ಕೆ ಅವಕಾಶವಿರಬಾರದು. ಅಲ್ಲದೆ ಗ್ರಾಮಗಳಲ್ಲಿರುವ ಜನರಲ್ಲೆ ವಾಲಂಟಿಯರುಗಳೆಂದು ನೇಮಕಮಾಡಿ ಕಳ್ಳತನಗಳನ್ನು ಹಿಡಿಯುವುದಕ್ಕೆ ಅವಕಾಶಮಾಡಿಕೊಡಬೇಕು. ಹೀಗೆ ಮಾಡುವುದರಿಂದ ಎಷ್ಟೋ ಕಳ್ಳತನಗಳನ್ನು ಮಟ್ಟಹಾಕಬಹುದು. ಇದು ಬಿಟ್ಟು ಅಧಿಕಾರಿಗಳಿಗೆ ಈ ಅಧಿಕಾರ ಕೊಟ್ಟರೆ ಲಂಚಕ್ಕೆ ಅವಕಾಶವಾಗುತ್ತದೆಯೇ ಹೊರತು ಅನುಕೂಲವಾಗುವುದಿಲ್ಲ. ಮೊದಲಿಗಿಂತ ಕಳ್ಳತನ ಕಡಿಮೆಯಾಗಿರಬಹುದು. ಆದರೆ ಈಗಿನ ಕಾಲದಲ್ಲಿ ನೌಕರರಿಗೆ ಕೊಡುವ ಸಂಬಳ ಸಾಲದು. ಇದರಿಂದ ಅನೇಕ ಅಧಿಕಾರಿಗಳು ಲಂಚ ತೆಗೆದುಕೊಳ್ಳಲು ಅವಕಾಶವಾಗುತ್ತದೆ. ಆದುದರಿಂದ ಇದನ್ನು ನಿಲ್ಲಿಸಬೇಕಾದರೆ ಮೊಬೈಲ್ ಪಾರ್ಟಿಯವರನ್ನು ಹೆಚ್ಚುಕಾಲ ಒಂದೇ ಕಡೆ ಇರಿಸಬಾರದು ಮತ್ತು ಇದರ ಜೊತೆಗೆ ಒಂದು ತಿದ್ದುಪಡಿಯ ಮೂಲಕ ಕಳ್ಳತನವನ್ನು ಕಂಡುಹಿಡಿಯುವುದಕ್ಕೆ ಖಾಸಗಿ ಜನರಿಗೆ ಅಧಿಕಾರ ಕೊಟ್ಟು ಕಳ್ಳತನವನ್ನು ಕಂಡುಹಿಡಿದವರಿಗೆ ಬಹುಮಾನ ಕೊಡುತ್ತೇವೆಂದು ಹೇಳಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಮಸೂದೆಯ ವಿಷಯದಲ್ಲಿ ಇನ್ನೂ ಅನೇಕರು ಮಾತನಾಡುವವರಿದ್ದಾರೆ. ಅರಣ್ಯಗಳ ವಿಚಾರದಲ್ಲಿ ಅನುಭವವಿರುವ ಶ್ರೀ ಚನ್ನಬಸಪ್ಪನವರೂ ಮಾತನಾಡಬಹುದು. ಆದುದರಿಂದ ನಾಳೆ ಇದರ ಚರ್ಚೆ ತೆಗೆದುಕೊಳ್ಳಬಹುದೆಂದು ಕಾಣುತ್ತದೆ.

ಅಧ್ಯಕ್ಷರು.—ಶನಿವಾರ ಬೆಳಿಗ್ಗೆ 8-30 ಘಂಟೆಗೆ ಸೇರೋಣ. ಆ ದಿವಸ ಯಾವಯಾವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ಗೊತ್ತುಮಾಡಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ದಿವಸವೇ ಚುನಾವಣೆಗಳ ಸಂಬಂಧವಾಗಿ ಮಾನ್ಯ ಲಾ ಸಚಿವರು ಒಂದು ಹೇಳಿಕೆ ಕೊಡುತ್ತಾರೆ. ಅವರು ಮಾತನಾಡಿದ ಮೇಲೆ, ಯಾರಾದರೂ ಸದಸ್ಯರುಗಳು ತಮಗೆ ಬೇಕಾದ ವಿಷಯಗಳನ್ನು ಚರ್ಚೆಮಾಡಿ ತಿಳಿದುಕೊಳ್ಳಲು ಮತ್ತು ಅವರ ಅಭಿಪ್ರಾಯಗಳನ್ನು ಸೂಚಿಸಲು ಒಂದು ಅನುಕೂಲವಾದ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಆದರೆ it may not be a motion as such.

Mr. SPEAKER.—On the statement we cannot take the opinion of the House.

The Hon'ble Sri H. C. DASAPPA.—We will see in what form we may make the motion.

Mr. SPEAKER.—The House now stands adjourned to meet again at 8-30 A.M. on Saturday the 13th October 1951.

The House adjourned at Twelve Minutes past Five of the Clock to meet again at Thirty Minutes past Eight of the Clock on Saturday, 13th October 1951.

WD 1046—GPB—500—13-11-1951